ದೂರವಾಣಿ: 2419677/2419361
ಫ್ಯಾಕ್ಸ್: 0821-2419363/2419301

ಇ-ಮೇಲ್: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ವಿಷಯ: 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಸುವ ಬಗೆಗೆ.

ಉಲ್ಲೇಖ: 1) ಸ್ಥಳೀಯ ವಿಚಾರಣಾ ಸಮಿತಿ ಭೇಟಿ ನೀಡಿದ ದಿನಾಂಕ 31.05.2024
2) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ದಿನಾಂಕ 11.06.2024
3) ಸಿಂಡಿಕೇಟ್ ಸಭೆಯ ನಿರ್ಣಯದ ದಿನಾಂಕ 12.06.2024

* * * * *

**ಸಂಯೋಜನೆ ಮುಂದುವರಿಕೆ ಮಂಜೂರಾತಿ ಆದೇಶ ಸಂಖ್ಯೆ ಸಿಡಿಸಿ-3/38/2024-25 ದಿನಾಂಕ 10.07.2024**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 59 (17)ರ ಮೇರೆಗೆ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಸೂಚಿಸಿರುವ ಷರತ್ತುಗಳಿಗೆ ಒಳಪಟ್ಟು ಮತ್ತು ಅವುಗಳನ್ನು ಕಾರ್ಯಗತಗೊಳಿಸುವಂತೆ ಸೂಚಿಸಿ ಕೆಳಕಂಡ ಕಾಲೇಜಿಗೆ ಪಟ್ಟಿಯಲ್ಲಿ ಸೂಚಿಸಿರುವ ಕೋರ್ಸು/ವಿಷಯಗಳಿಗೆ 2024-25ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಪ್ರಾಧಿಕಾರಗಳ ಅನುಮೋದನೆಯನ್ವಯ ತಾತ್ಕಾಲಿಕ ಸಂಯೋಜನಾ ಮುಂದುವರಿಕೆ ಮಂಜೂರಾತಿ ಆದೇಶ ನೀಡಲಾಗಿದೆ.

**ಕಾಲೇಜಿನ ಹೆಸರು : ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು, ಮೈಸೂರು**

ಮುಂದುವರಿಕೆ ಸಂಯೋಜನೆ:

| ಶಿಕ್ಷಣ | ಭಾಷೆಗಳು | ಐಚ್ಛಿಕಗಳು | ವಿಷಯ ಸಮೂಹ | ವಿಭಾಗ | ಒಟ್ಟು ಪ್ರವೇಶ ಮಿತಿ |
|---|---|---|---|---|---|
| ಬಿ.ಎಸ್ಸಿ. | ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ | ಭೌತಶಾಸ್ತ್ರ, ಗಣಿತಶಾಸ್ತ್ರ, ಗಣಕವಿಜ್ಞಾನ, ವಿದ್ಯುನ್ಮಾನ ಶಾಸ್ತ್ರ | PMCs/MECs PME | 02 | 120 |
| ಬಿ.ಸಿ.ಎ. | | ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ | - | 03 | 180 |
| ಬಿ.ಕಾಂ. | | ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ | - | 02 | 120 |
| ಬಿ.ಬಿ.ಎ. | | ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ | - | 01 | 60 |

**2024-25ನೇ ಶೈಕ್ಷಣಿಕ ಸಾಲಿಗೆ ಶಾಶ್ವತ ಸಂಯೋಜನೆ ಕೋರಿರುವ B.Com. -120, B.C.A-180, B.Sc-120 ಕೋರ್ಸಿಗೆ ಸ್ಥಳೀಯ ವಿಚಾರಣಾ ಸಮಿತಿಯು ಶಿಫಾರಸ್ಸು ಮಾಡಿದ್ದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ, ಸರ್ಕಾರದಿಂದ ಆದೇಶ ಬಂದ ನಂತರ ವಿಶ್ವವಿದ್ಯಾನಿಲಯದಿಂದ ಶಾಶ್ವತ ಸಂಯೋಜನಾ ಆದೇಶವನ್ನು ನೀಡಲಾಗುವುದು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.**

ವಿ.ಸೂ.:

1. ಸಂಯೋಜನಾ ಮಂಜೂರಾತಿ ಆದೇಶದಲ್ಲಿ ನೀಡಿರುವ ಕೋರ್ಸು/ವಿಷಯ/ವಿಷಯಸಮೂಹಗಳಿಗೆ ನಿಗದಿಪಡಿಸಿರುವ ಪ್ರವೇಶಾತಿ ಸಂಖ್ಯೆಗೆ ಮಾತ್ರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ಸಂಯೋಜನಾ ಮಂಜೂರಾತಿ ಆದೇಶ ನೀಡದೇ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಹೊಸದಾಗಿ ಶಿಫಾರಸ್ಸು ಮಾಡದಿರುವ ಕೋರ್ಸು/ವಿಷಯ/ವಿಷಯ ಸಮೂಹಗಳನ್ನು/ಪ್ರವೇಶಾತಿ ಸಂಖ್ಯೆಯನ್ನು ಪ್ರವೇಶ ಮಾಡಿಕೊಳ್ಳತಕ್ಕದ್ದಲ್ಲ.
2. ಸ್ಥಳೀಯ ವಿಚಾರಣಾ ಸಮಿತಿಯು ನೀಡಿರುವ ವರದಿಯಲ್ಲಿ ಶಿಫಾರಸ್ಸು ಮಾಡಿದ್ದರೂ/ಸರ್ಕಾರದ ಅನುಮೋದನೆ ದೊರೆತಿದ್ದರೂ ವಿಶ್ವವಿದ್ಯಾನಿಲಯದ ಸಂಯೋಜನಾ ಮಂಜೂರಾತಿ ಆದೇಶ ಪಡೆಯದೇ ಯಾವುದೇ ಕೋರ್ಸು/ ವಿಷಯ/ ವಿಷಯಸಮೂಹ/ ಪ್ರವೇಶಾತಿ ಸಂಖ್ಯೆಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ಅಂತಹ ಸಂದರ್ಭದಲ್ಲಿ ಆಗಬಹುದಾದ ತೊಂದರೆಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂಬ ಅಂಶವನ್ನು ಗಮನಿಸತಕ್ಕದ್ದು.

ಮು.ತಿ.ನೋ.

ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಷರತ್ತುಗಳು :

- College must undertake attempts to improve human resources quality.
- Results of B.Sc. courses need to be improved.

ವಿಶ್ವವಿದ್ಯಾನಿಲಯದ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದ ಷರತ್ತುಗಳನ್ನು 2024-25ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಮುನ್ನ ತಪ್ಪದೇ ಪಾಲಿಸುವುದು ಮತ್ತು ಇದರ ಸಂಬಂಧ **ಅಗತ್ಯ ದಾಖಲೆಗಳೊಡನೆ ಸಮರ್ಪಕ ಅನುಪಾಲನಾ ವರದಿಯನ್ನು** ಒಂದು ತಿಂಗಳೊಳಗಾಗಿ ಕಾಲೇಜು ಅಭಿವೃದ್ಧಿ ಮಂಡಳಿ ಕಛೇರಿಗೆ ತಲುಪಿಸುವುದು. ಪರೀಕ್ಷಾ ನಿಯಮ/ ಪ್ರವೇಶಾತಿ ಮತ್ತು ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕುಲಸಚಿವರು
ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಗೆ,

ಪ್ರಾಂಶುಪಾಲರು,
ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು,
ಎನ್.ಐ.ಇ. ಕ್ಯಾಂಪಸ್, ವಿಶ್ವೇಶ್ವರನಗರ,
ಮೈಸೂರು-570008.

ಪ್ರತಿಗಳು:

1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು-560 001.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
3. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
4. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಹುಣಸೂರು ರಸ್ತೆ, ಮೈಸೂರು.
5. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಉಪಕುಲಸಚಿವರು (ಶೈಕ್ಷಣಿಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿಗಳ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಅಧೀಕ್ಷಕರು, ಸಿಡಿಸಿ/ಕಛೇರಿ ಪ್ರತಿ/ರಕ್ಷಾ ಕಡತಕ್ಕೆ